# ಹಾಸ್ಯ ಅಂದರೆ ಡಬಲ್ ಮೀನಿಂಗೇ ಅಲ್ಲ, ಜನ ಆದನ್ನೂ ಇಷ್ಟಪಡುತ್ತಾರೆ

**ಸೂರಜ್**
**ಝೀ ಕನ್ನಡದ**
**ಕಾಮಿಡಿ ಕಿಲಾಡಿಗಳು ನಟ**

◆ ಕಾಮಿಡಿ ಕಿಲಾಡಿ ಆಗಿದ್ದು ಹೇಗೆ?

ಮೂಲತಃ ಮಂಗಳೂರು ನನ್ನೂರು. ತಂದೆ ಪೊಲೀಸ್ ಇಲಾಖೆಯಲ್ಲಿದ್ದಾರೆ. ಅಮ್ಮ ಗೃಹಿಣಿ ಇಬ್ಬರು ತಮ್ಮಂದಿರು ಇದ್ದಾರೆ. ಶಾಲಾದಿನಗಳಲ್ಲಿಯೇ ಕಲೆಯ ಅಭಿರುಚಿ ಮೂಡಿತು. ಹಾಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಭಾಗವಹಿಸುತ್ತಿದ್ದೆ. ಅದೇ ಕಾಲೇಜಿನಲ್ಲಿಯೂ ಮುಂದುವರಿಯಿತು ನಾಟಕ– ಸ್ಕಿಟ್ ಎಂದು ಓಡಾಡುತ್ತಿದ್ದೆ. ಆದರೆ ಅದನ್ನು ಮನೆಯಲ್ಲಿ ಹೇಳುವ ಧೈರ್ಯ ಇರಲಿಲ್ಲ. ಮನೆಯಲ್ಲಿ ಹೇಳಿದರೆ ಓದನ್ನು ಬಿಟ್ಟು ನಾಟಕ ಮಾಡಲು ಹೋಗುತ್ತೀಯಾ ಎಂದು ಬೈಯುತ್ತಾರೆ ಎನ್ನುವ ಭಯ ನನ್ನನ್ನು ಕಾಡುತ್ತಿತ್ತು. ಡಿಗ್ರಿ ಓದುವಾಗ ಝೀ ಕನ್ನಡದ 'ಕಾಮಿಡಿ ಕಿಲಾಡಿಗಳಿಗೆ' ಆಡಿಷನ್ ಮಂಗಳೂರಿನಲ್ಲಿಯೇ ನಡಿತಾ ಇತ್ತು. ನಟನಾಗುವ ಬಯಕೆಯನ್ನು ಹೇಳದೆ ತೆಪ್ಪಗೆ ಇದ್ದ ನಾನು ಆಡಿಷನ್‌ಗೆ ಹೋಗುವ ಬಯಕೆಯನ್ನು ವ್ಯಕ್ತಪಡಿಸಿದೆ. ಹೇಗೋ ಮನೆಯಲ್ಲಿ ಅನುಮತಿ ಪಡೆದು ಆಡಿಷನ್ ನೀಡಿದೆ ಆಯ್ಕೆಯಾದೆ. ನಂತರ ಬೆಂಗಳೂರಿಗೆ ಸ್ಕ್ರೀನ್ ಟೆಸ್ಟ್‌ಗೆ ಕರೆದರೂ ಅಲ್ಲಿಯೂ ಆಯ್ಕೆ ಆಗಿದ್ದರಿಂದ ನಟಿಸುತ್ತಿದ್ದೇನೆ. ಇದು ನನ್ನ ಬಯಕೆಯಂತೆ ಸಿಕ್ಕ ಅಮೋಘ ಅವಕಾಶ ಎಂದು ಭಾವಿಸಿದ್ದೇನೆ.

◆ ಯಾರಾದರೂ ಕಿಂಡಲ್ ಮಾಡಿದರೆ ನಿಮಗೆ ಏನೆನಿಸುತ್ತದೆ?

ಹಾಸ್ಯ ಕಲಾವಿದ ಎಂದು ಗುರುತಿಸಿಕೊಂಡಿದ್ದೇನೆ ಅಂದರೆ ಜನ ನಮ್ಮನ್ನು ಕಂಡಾಗ ಹಾಸ್ಯ ಮಾಡುವುದು ಸಾಮಾನ್ಯ. ಅಪರಿಚಿತರು ನಮ್ಮನ್ನು ನೋಡಿ ನಗುವುದು, ಕುತೂಹಲದಿಂದ ನಗೆಯ ಮಾತುಗಳನ್ನು ಆಡುವುದು ನಿಜಕ್ಕೂ ಖುಷಿಯಾಗುತ್ತದೆ. ಒಬ್ಬ ಕಲಾವಿದನಾಗಿ ಪ್ರೇಕ್ಷಕರನ್ನು ನಗಿಸಬೇಕು ಎನ್ನುವುದೇ ನನ್ನ ಅದಮ್ಯ ಬಯಕೆ. ಹೀಗಿರುವಾಗ ಜನ ನನ್ನನ್ನು ನೋಡಿಯೇ ನಗುತ್ತಾರೆ ಎಂದರೆ ಅದು ನನಗೆ ಇಷ್ಟವಾಗುತ್ತದೆ. ಈಗಲೂ ಯಾರಾದರೂ ನನಗೆ ತಮಾಷೆ ಮಾಡಿದರೆ ಅದನ್ನು ನಾನು ಕಿಂಡಲ್ ಎಂದು ಭಾವಿಸುವುದಿಲ್ಲ.

◆ ಪುರುಷರೇ ಮಹಿಳೆಯರ ಪಾತ್ರ ಮಾಡುವುದು ಸರಿ ಕಾಣಲ್ಲ ಅಲ್ವಾ?

ವೀಕ್ಷಕರಲ್ಲಿಯೇ ಬೇರೆ ಬೇರೆ ಭಾವನೆಗಳು ಇರುತ್ತವೆ. ಕೆಲವರಿಗೆ ಅದು ಇಷ್ಟ ಆಗಲ್ಲ, ಇನ್ನೂ ಕೆಲವರಿಗೆ ಆ ರೀತಿಯ ಪಾತ್ರಗಳೇ ಬೇಕು. ಒಟ್ಟಾರೆ ಜನರ ಖುಷಿಗಾಗಿ ಅಂತಹ ಪಾತ್ರ ನಿರ್ವಹಣೆ ಮಾಡಬೇಕು ಎಂದು ಅನಿಸುತ್ತದೆ. ಹುಡುಗರು ಹುಡುಗಿಯರ ಪಾತ್ರ ಮಾಡಿದಾಗ ವಿಷಯ ವಿಸ್ತಾರ ಹೆಚ್ಚುತ್ತದೆ. ಕೆಲವೊಮ್ಮೆ ಡಬಲ್ ಮೀನಿಂಗ್ ಡೈಲಾಗ್ ಸಹಜವಾಗಿ ಬರುತ್ತವೆ. ಹುಡುಗಿಯರೂ ಕಾಮಿಡಿಯ ಪಾತ್ರಗಳನ್ನೂ ಮಾಡಬಹುದು. ಆದರೆ, ಡೈಲಾಗಿಗೆ ಹೆಚ್ಚಿನ ಸ್ವಾತಂತ್ರ್ಯ ಇರುವುದಿಲ್ಲ. ಮಹಿಳೆಯರೂ ಹಾಸ್ಯ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಡೈಲಾಗ್ ಸಂಬಂಧ ಇಂತಹ ಪರಿವರ್ತನೆ ಬೇಕಾಗುತ್ತದೆ ಎಂದು ಅನ್ನಿಸುತ್ತದೆ. ಜನ ಈ ರೀತಿಯ ಡೈಲಾಗ್ ಅಪೇಕ್ಷೆಪಡುವುದೂ ಇದಕ್ಕೆ ಕಾರಣ.



◆ ಹಾಸ್ಯಕ್ಕೆ ದ್ವಂದ್ವಾರ್ಥವೇ ಬೇಕು ಎಂಬ ಹಟ ಏಕೆ?

ಹಾಸ್ಯಕ್ಕೆ ಡಬಲ್ ಮೀನಿಂಗ್ ಬೇಡ. ಸಹಜ ಮಾತಿನಲ್ಲಿಯೇ ಹಲವು ಬಗೆಯ ವಿನೋದವನ್ನು ಹೊರಹೊಮ್ಮಿಸಬಹುದು. ಅದಕ್ಕೆ ವಿಷಯ ವಸ್ತು ಕೂಡ ಹಲವು ಸಿಗಲು ಸಾಧ್ಯ. ಆದರೆ ವೀಕ್ಷಕರಿಗೆ ಆ ರೀತಿ ಬಯಸುತ್ತಾರೆ ಎಂಬ ಭಾವನೆ ಇದೆ. ನಾಟಕೀಯ ವಿಷಯ ವಸ್ತುಗಳನ್ನು ಹೆಚ್ಚು ತೆಗೆದುಕೊಳ್ಳುವುದರಿಂದ ವೃತ್ತಿರಂಗದ ಛಾಯೆ ಒಂದಿಷ್ಟು ಮೂಡುತ್ತದೆ. ಡಬಲ್ ಮೀನಿಂಗ್ ಡೈಲಾಗ್‌ನಲ್ಲಿಯೇ ಹಾಸ್ಯ ಇರಲ್ಲ. ಅದು ಅಗತ್ಯವೂ ಇಲ್ಲ.

◆ ನಿಮಗೆ ದುರಂತ ಪಾತ್ರ ಸಿಕ್ಕರೆ ಏನು ಮಾಡುತ್ತೀರಿ?

ಖಂಡಿತ ಒಪ್ಪುತ್ತೇನೆ. ಯಾವುದೇ ಪಾತ್ರ ಸಿಕ್ಕರೂ ಸರಿ. ಅದಕ್ಕೆ ಅಗತ್ಯ ಇರುವ ತಯಾರಿಯನ್ನು ಮಾಡಿಕೊಳ್ಳುತ್ತೇನೆ. ನಾನು ಹೊಸ ಪಾತ್ರವನ್ನು ಹೇಗೆ ಮಾಡಬೇಕು ಎಂದು ಮನೆಯಲ್ಲಿ ವರ್ಕೌಟ್ ಮಾಡಿಕೊಳ್ಳುತ್ತೇನೆ. ಕಾಮಿಡಿ ಕಿಲಾಡಿಗಳಲ್ಲಿಯೂ ನಾನು ಹಲವು ಬಗೆಯ ಪಾತ್ರಗಳನ್ನು ಮಾಡಿದ್ದೇನೆ. ಇಲ್ಲಿ ಎಲ್ಲ ಬಗೆಯ ಪಾತ್ರವನ್ನು ನಿರ್ವಹಿಸುವ ಶಕ್ತಿ ಸಿಗುತ್ತದೆ ಎಂದುಕೊಂಡಿದ್ದೇನೆ.

◆ ಕಾಮಿಡಿ ಕಿಲಾಡಿಗಳಲ್ಲಿ ಇಷ್ಟವಾದ ವೇಷ ಯಾವುದು?

ತುಂಬ ಪಾತ್ರಗಳನ್ನು ಮಾಡಿದ್ದೇನೆ. ಆ ಕ್ಷಣದಲ್ಲಿ ದಿನವೂ ಹೊಸ ಹೊಸ ಕಥೆಗಳನ್ನು ನಿರ್ವಹಿಸುತ್ತೇವೆ. ಹಾಗಾಗಿ ಎಲ್ಲ ಇಷ್ಟ ಆಗುತ್ತವೆ. ಇಲ್ಲಿ ಏಕತಾನತೆ ಎಂದು ಅನ್ನಿಸುವುದಿಲ್ಲ. ಒಂದು ಪಾತ್ರವಾಗಿ ನೋಡುವುದಕ್ಕಿಂತ ನಾವು ತೆಗೆದುಕೊಂಡ ಸ್ಕಿಟ್ ಗೆಲ್ಲುತ್ತಾ ಎಂದು ಯೋಚನೆ ಮಾಡುತ್ತೇವೆ. ಬೆಳಿಗ್ಗೆ ಎದ್ದು ದೇವರಿಗೆ ಕೈ ಮುಗಿದಾಗ ಕೂಡ ಜನರನ್ನು ಮತ್ತಷ್ಟು ನಗಿಸುವ ಶಕ್ತಿಯನ್ನು ಕೊಡು ಎಂದು ಬೇಡುತ್ತೇನೆ. ದಿನ ದಿನವೂ ಬೇರೆ ಬೇರೆ ಕಾಮಿಡಿ ಸನ್ನಿವೇಶಗಳನ್ನು ನಿರ್ವಹಿಸಿದ್ದೇನೆ. ಅದರಲ್ಲಿ ಡಿಕೆಡಿಯ ಡಾನ್ಸ್ ಮಾಸ್ಟರ್ ಪಾತ್ರ. ಸರಿಗಮಪಕ್ಕೆ ಸಂಬಂಧಿಸಿದ ಪಾತ್ರ ತುಂಬ ಕಾಡುತ್ತವೆ.

■ **ರಾಘವೇಂದ್ರ ಕೆ.**